ಅಕ್ರಮ ಒಂದಂಕಿ ಲಾಟರಿ ವ್ಯವಹಾರ

1206(2352); ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)

ಅ) ಇತ್ತೀಚೆಗೆ ರಾಜ್ಯದಲ್ಲಿ ಅಕ್ರಮ ಒಂದಂಕಿ ಲಾಟರಿ ದಂಧೆ ಹಾಗೂ ವಿವಿಧ ರೀತಿಯ ಬೆಟ್ಟಿಂಗ್ ಪ್ರಕರಣಗಳು ಬೆಳಕಿಗೆ ಬಂದಿರುವುದು ನಿಜವೇ;

ಆ) ಸದರಿ ಪ್ರಕರಣಗಳ ಹಿಂದಿರುವ ವ್ಯಕ್ತಿಗಳಾರು ಎನ್ನುವುದು ತಿಳಿದಿದೆಯೇ; ಈ ಪ್ರಕರಣಗಳ ವಿಚಾರಣೆ/ತನಿಖೆಯಾಗಿ ಈಗಾಗಲೇ ಎಷ್ಟು ಜನರನ್ನು ಬಂಧಿಸಲಾಗಿದೆ.

ಇ) ಪ್ರಕರಣದಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು; ಕ್ರಿಕೆಟ್ ಸೇರಿದಂತೆ ವಿವಿಧ ಬೆಟ್ಟಿಂಗ್ ಪ್ರಕರಣಗಳಲ್ಲಿ ಯಾರ್ಯಾರ ಹೆಸರು ಕೇಳಿಬಂದಿರುತ್ತದೆ;

ಈ) ಅಂತಹವರುಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ಪ್ರಕರಣವನ್ನು ಕೂಡಾ ಸಿ.ಬಿ.ಐ.ಗೆ ವಹಿಸುವ ಚಿಂತನೆ ಸರ್ಕಾರದ ಮುಂದಿದೆಯೇ; ಇಲ್ಲದಿದ್ದಲ್ಲಿ; ಕಾರಣಗಳೇನು; ಹಾಗಿದ್ದಲ್ಲಿ, ಯಾವ ರೀತಿ ತನಿಖೆ ಮಾಡಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಇತ್ತೀಚೆಗೆ ರಾಜ್ಯದಲ್ಲಿ ಅಕ್ರಮ ಒಂದಂಕಿ ಲಾಟರಿ ದಂಧೆ ಹಾಗೂ ವಿವಿಧ ರೀತಿಯ ಬೆಟ್ಟಿಂಗ್ ಪ್ರಕರಣಗಳು ಬೆಳಕಿಗೆ ಬಂದಿವೆ".

ಆ) ಒಂದಂಕಿ ಲಾಟರಿ/ಲಾಟರಿ ಪ್ರಕರಣಗಳ ವಿವರವನ್ನು **ಅನುಬಂಧ–ಅ** ದಲ್ಲಿ ಮತ್ತು ಬೆಟ್ಟಿಂಗ್ ದಂಧೆಯ ಪ್ರಕರಣಗಳ ವಿವರವನ್ನು **ಅನುಬಂಧ–ಆ** ದಲ್ಲಿ ಒದಗಿಸಿದೆ.

ಇ) ಮತ್ತು ಈ) ಈ ಪ್ರಕರಣದಲ್ಲಿ ಈ ಹಿಂದೆ ಬೆಂಗಳೂರು ಕಮೀಷನರೇಟ್‌ನಲ್ಲಿ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ಶ್ರೀ ಅಲೋಕ್ ಕುಮಾರ್ ಐ.ಪಿ.ಎಸ್ ಮತ್ತು ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳದಲ್ಲಿ ಪೊಲೀಸ್ ಅಧೀಕ್ಷಕರಾಗಿದ್ದ ಶ್ರೀ ಧರಣೇಂದ್ರ ಹಾಗೂ ಶ್ರೀ ಹೆಚ್ ನಾಗರಾಜ್ ಶೀಘ್ರ ಲಿಪಿಗಾರರವರು ಆರೋಪಿ ರಾಜನ್‌ನೊಂದಿಗೆ ಸಂಪರ್ಕದಲ್ಲಿರುವುದು ತನಿಖೆಯಲ್ಲಿ ತಿಳಿದು ಬಂದಿರುತ್ತದೆ ಹಾಗೂ ಆರೋಪಿಯೊಂದಿಗೆ ಸಂಪರ್ಕದಲ್ಲಿದ್ದ ಇತರ ಅಧಿಕಾರಿಗಳ ಬಗ್ಗೆ ತನಿಖೆ ಮುಂದುವರೆದಿರುತ್ತದೆ.

ಬೆಂಗಳೂರು ಕಮೀಷನರೇಟ್‌ನಲ್ಲಿ ಹೆಚ್ಚವರಿ ಪೊಲೀಸ್ ಆಯುಕ್ತರಾಗಿದ್ದ ಶ್ರೀ ಅಲೋಕ್ ಕುಮಾರ್ ಐ.ಪಿ.ಎಸ್ ರವರನ್ನು ದಿನಾಂಕ: 23/05/2015 ರಂದು ಪೊಲೀಸ್ ಅಧೀಕ್ಷಕರಾದ ಶ್ರೀ ಧರಣೇಂದ್ರವರನ್ನು ದಿನಾಂಕ:08/05/2015 ರಂದು ರ್‍ಯಾಜ್ಯ ಸರ್ಕಾರವು ಅಮಾನತ್ತು ಪಡಿಸಿರುತ್ತೆ. ಹೆಚ್. ನಾಗರಾಜ್ ರವರನ್ನು ದಿನಾಂಕ:23/05/2015 ರಂದು ಡಿ.ಜಿ.ಪಿ & ಐ.ಜಿ.ಪಿ ರವರು ಅಮಾನತ್ತು ಪಡಿಸಿರುತ್ತಾರೆ. ಈ ಪ್ರಕರಣವನ್ನು ಸಿ.ಬಿ.ಐಗೆ ವಹಿಸಲು ದಿನಾಂಕ:28/05/2015 ರಂದು ಪತ್ರ ಸಂಖ್ಯೆ ಹೆಚ್‌ಡಿ/113/ಸಿಐಡಿ/2015 ದಿನಾಂಕ: 28–05–2015 ರಂತೆ ಸರ್ಕಾರವು ತೀರ್ಮಾನಿಸಿ ಸಿ.ಬಿ.ಐ ನವದೇಹಲಿ ರವರಿಗೆ ಪತ್ರ ಬರೆದಿದ್ದು ಸಿ.ಬಿ.ಐ ರವರು ಮುಂದಿನ ತನಿಖೆಯನ್ನು ವಹಿಸಿಕೊಳ್ಳಬೇಕಾಗಿರುತ್ತದೆ.

ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಸಂಬಂಧಿಸಿದಂತೆ ಪೊಲೀಸ್ ಸಿಬ್ಬಂದಿಯವರು ಶಾಮೀಲಾಗಿರುವ ಒಂದು ಪ್ರಕರಣ ಬೆಳಗಾವಿ ಜಿಲ್ಲೆಯ ಸವದತ್ತಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 180/2012 ಕಲಂ 78(i)(a)(6) K.P.Act ರೀತ್ಯಾ 01 ಪ್ರಕರಣ ದಾಖಲಾಗಿದ್ದು, ವಿವರ ಕೆಳಗಿನಂತಿದೆ.

ಆರೋಪಿತನಾದ ಶ್ರೀ ಸಂತೋಷ ಸಣ್ಣಪ್ಪ ಲಕ್ಕಮ್ಮನವರ, ಸಿಪಿಸಿ–744, ಅಬಕಾರಿ ಮತ್ತು ಲಾಟರಿ ನಿಷೇಧ ದಳ, ಧಾರವಾಡರವರು ಶಾಮೀಲಾಗಿದ್ದು, ಈತನನ್ನು ದಿನಾಂಕ : 24.04.2012 ರಂದು ದಸ್ತಗಿರಿ ಮಾಡಿ ಕಾನೂನಿನಂತೆ ಕ್ರಮಕ್ಕೆಗೊಳ್ಳಲಾಗಿದೆ.

ಹುಬ್ಬಳ್ಳಿ– ಧಾರವಾಡ ಡಿ.ಸಿ.ಪಿ (ಕಾನೂನು ಮತ್ತು ಸುವ್ಯವಸ್ಥೆ) ಇವರು ಕ್ರಿಕೆಟ್ ಬೆಟ್ಟಿಂಗ್ ಅಕ್ರಮ ದಂಧೆಯಲ್ಲಿ ಒಳಗೊಂಡಿರುವ ವ್ಯಕ್ತಿಗಳಿಂದ ಹಣವನ್ನು ನೀಡುವಂತೆ ಕೋರಿರುವ ಬಗ್ಗೆ ಸುವರ್ಣ ನ್ಯೂಸ್ (z24x7) ಸುದ್ದಿವಾಹಿನಿಯಲ್ಲಿ ಪ್ರಸಾರವಾದ ಕೂಡಲೇ ಸಂಬಂಧಿಸಿದ ಅಧಿಕಾರಿಯವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶಿಸಿದ್ದು, ಸದರಿ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

ಅನುಬಂಧ–ಆ

ಬೆಟ್ಟಿಂಗ್ ಪ್ರಕರಣಗಳಲ್ಲಿ ದಸ್ತಗಿರಿ ಮಾಡಲ್ಪಟ್ಟ ಆರೋಪಿತರ ಸಂಖ್ಯೆ

ಕ್ರ. ಸಂ	ಜಿಲ್ಲೆಗಳು	2012	2013	2014	2015
1	ಬೆಂಗಳೂರು ನಗರ	35	64	175	48
2	ಮೈಸೂರು ನಗರ	01	04	09	13
3	ಹುಬ್ಬಳ್ಳಿ-ಧಾರವಾಡ ನಗರ	30	34	29	37
4	ಮಂಗಳೂರು ನಗರ	00	00	04	30
5	ಬೆಳಗಾವಿ ನಗರ	13	00	05	36
6	ಬೆಂಗಳೂರು ಜಿಲ್ಲೆ	36	00	00	11
7	ತುಮಕೂರು ಜಿಲ್ಲೆ	00	00	21	14
8	ಕೋಲಾರ ಜಿಲ್ಲೆ	07	00	07	07
9	ರಾಮನಗರ ಜಿಲ್ಲೆ	00	00	07	20
10	ಚಿಕ್ಕಬಳ್ಳಾಪುರ ಜಿಲ್ಲೆ	00	00	00	01
11	ಕೆ.ಜಿ.ಎಫ್.	00	00	00	02
12	ಮೈಸೂರು ಜಿಲ್ಲೆ	00	00	21	00
13	ಮಂಡ್ಯ ಜಿಲ್ಲೆ	13	03	20	48

14	ಹಾಸನ ಜಿಲ್ಲೆ	04	03	24	39
15	ಕೊಡಗು ಜಿಲ್ಲೆ	00	00	00	00
16	ಚಾಮರಾಜನಗರ ಜಿಲ್ಲೆ	09	00	00	00
17	ಬೆಳಗಾವಿ ಜಿಲ್ಲೆ	17	18	04	12
18	ವಿಜಯಾಪುರ ಜಿಲ್ಲೆ	06	09	06	61
19	ಧಾರವಾಡ ಜಿಲ್ಲೆ	00	00	00	01
20	ಬಾಗಲಕೋಟೆ ಜಿಲ್ಲೆ	00	00	00	13
21	ಗದಗ ಜಿಲ್ಲೆ	00	12	02	07
22	ಚಿತ್ರದುರ್ಗ ಜಿಲ್ಲೆ	00	00	01	21
23	ಹಾವೇರಿ ಜಿಲ್ಲೆ	00	06	10	26
24	ಶಿವಮೊಗ್ಗ ಜಿಲ್ಲೆ	20	22	26	15
25	ದಾವಣಗೆರೆ ಜಿಲ್ಲೆ	58	61	27	23
26	ದಕ್ಷಿಣ ಕನ್ನಡ ಜಿಲ್ಲೆ -	00	02	00	07
27	ಉತ್ತರ ಕನ್ನಡ ಜಿಲ್ಲೆ -	00	00	00	11
28	ಚಿಕ್ಕಮಗಳೂರು ಜಿಲ್ಲೆ	05	00	00	09
29	ಉಡುಪಿ ಜಿಲ್ಲೆ	11	02	19	12
30	ಬಳ್ಳಾರಿ ಜಿಲ್ಲೆ	92	33	20	06
31	ಕಲಬುರಗಿ ಜಿಲ್ಲೆ	12	14	07	23
32	ಬೀದರ್ ಜಿಲ್ಲೆ	00	00	05	33
33	ರಾಯಚೂರು ಜಿಲ್ಲೆ	10	29	16	01
34	ಕೊಪ್ಪಳ ಜಿಲ್ಲೆ	00	00	02	20
35	ಯಾದಗಿರಿ ಜಿಲ್ಲೆ	00	01	01	00
ಒಟ್ಟು		379	317	468	607

ಅನುಬಂಧ – ಆ

ಬೆಟ್ಟಿಂಗ್ ಪ್ರಕರಣಗಳು ದಾಖಲಾದ ವಿವರಗಳು

ಕ್ರ. ಸಂ	ಜಿಲ್ಲೆಗಳು	2012	2013	2014	2015
1	ಬೆಂಗಳೂರು ನಗರ	18	12	25	48
2	ಮೈಸೂರು ನಗರ	01	03	03	03
3	ಹುಬ್ಬಳ್ಳಿ-ಧಾರವಾಡ ನಗರ	11	07	12	06
4	ಮಂಗಳೂರು ನಗರ	00	00	01	08
5	ಬೆಳಗಾವಿ ನಗರ	04	00	01	10
6	ಬೆಂಗಳೂರು ಜಿಲ್ಲೆ	02	00	00	01
7	ತುಮಕೂರು ಜಿಲ್ಲೆ	00	00	05	01
8	ಕೋಲಾರ ಜಿಲ್ಲೆ	01	00	03	01
9	ರಾಮನಗರ ಜಿಲ್ಲೆ	00	00	01	03
10	ಚಿಕ್ಕಬಳ್ಳಾಪುರ ಜಿಲ್ಲೆ	00	00	00	01
11	ಕೆ.ಜಿ.ಎಫ್.	00	00	00	01
12	ಮೈಸೂರು ಜಿಲ್ಲೆ	00	00	08	00
13	ಮಂಡ್ಯ ಜಿಲ್ಲೆ	04	02	03	11

14	ಹಾಸನ ಜಿಲ್ಲೆ	02	02	05	08
15	ಕೊಡಗು ಜಿಲ್ಲೆ	00	00	00	00
16	ಚಾಮರಾಜನಗರ ಜಿಲ್ಲೆ	03	00	00	00
17	ಬೆಳಗಾವಿ ಜಿಲ್ಲೆ	05	03	01	05
18	ವಿಜಯಾಪುರ ಜಿಲ್ಲೆ	01	03	01	12
19	ಧಾರವಾಡ ಜಿಲ್ಲೆ	00	00	00	01
20	ಬಾಗಲಕೋಟೆ ಜಿಲ್ಲೆ	00	00	00	03
21	ಗದಗ ಜಿಲ್ಲೆ	00	02	01	02
22	ಚಿತ್ರದುರ್ಗ ಜಿಲ್ಲೆ	00	00	01	05
23	ಹಾವೇರಿ ಜಿಲ್ಲೆ	00	03	04	03
24	ಶಿವಮೊಗ್ಗ ಜಿಲ್ಲೆ	04	03	08	02
25	ದಾವಣಗೆರೆ ಜಿಲ್ಲೆ	19	17	11	08
26	ದಕ್ಷಿಣ ಕನ್ನಡ ಜಿಲ್ಲೆ -	00	01	00	01
27	ಉತ್ತರ ಕನ್ನಡ ಜಿಲ್ಲೆ -	00	00	00	01
28	ಚಿಕ್ಕಮಗಳೂರು ಜಿಲ್ಲೆ	02	00	00	01
29	ಉಡುಪಿ ಜಿಲ್ಲೆ	03	01	03	03
30	ಬಳ್ಳಾರಿ ಜಿಲ್ಲೆ	07	13	08	04
31	ಕಲಬುರಗಿ ಜಿಲ್ಲೆ	04	03	03	06
32	ಬೀದರ್ ಜಿಲ್ಲೆ	00	00	02	07
33	ರಾಯಚೂರು ಜಿಲ್ಲೆ	02	07	05	01
34	ಕೊಪ್ಪಳ ಜಿಲ್ಲೆ	00	00	02	07
35	ಯಾದಗಿರಿ ಜಿಲ್ಲೆ	00	01	01	00
ಒಟ್ಟು		93	83	118	174